O.S. ನಂಬರಃ 30/2019

ಪಿ. ಡಬ್ಲ್ಯೂಃ 1

ದಿಃ 10-11-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಸ್ ಓ ಎನ್ ವಕೀಲರಿಂದಃ

ಸರ್ವೆ ನಂ. 357/ಬ ಆಸ್ತಿಯನ್ನು ನನ್ನ ಚಿಕ್ಕಪ್ಪನಾದ ಕೃಷ್ಣಾ ರಾಮಚಂದ್ರ ಶೆಟ್ಟಿ ರವರಿಂದ ರೂ.3,38,000/- ಗಳಿಗೆ ಖರೀದಿಸಿದ್ದೇನೆ. ನನ್ನ ಚಿಕ್ಕಪ್ಪ ಆಸ್ತಿ ಯಾವ ಕಾರಣಕ್ಕಾಗಿ ನನಗೆ ಮಾರಾಟ ಮಾಡಬೇಕೆಂದ ಆತನಿಗೆ ಪ್ರಮೇಯ ಉಂಟಾಗಿತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ಕ್ರಯ ಪತ್ರದಲ್ಲಿ ಯಾವ ಕಾರಣದಿಂದ ಆಸ್ತಿ ಮಾರಾಟ ಮಾಡಿದೆ ಎಂದು ಬರೆಯಲಾಗಿದೆ ಎಂದು ನನಗೆ ಮಾಹಿತಿ ಇಲ್ಲ. ಆಸ್ತಿ ಯಾವ ಕಾರಣಕ್ಕಾಗಿ ಮಾರಾಟ ಮಾಡುತ್ತೇವೆ ಎಂದು ನನ್ನ ಚಿಕ್ಕಪ್ಪ ನನ್ನ ಬಳಿ ತಿಳಿಸಿಲ್ಲ. ಸದರಿ ಮಾರಾಟ ಮಾಡುವ ನಿಖಟ ಪೂರ್ವದಲ್ಲಿ ನನ್ನ ಚಿಕ್ಕಪ್ಪ ಕೆಇಬಿ ನಿವೃತ್ತ ನೌಕರನಾಗಿದ್ದ ಎಂದರೆ ಸರಿ. ಕೆಇಬಿ ಯಲ್ಲಿ ನನ್ನ ಚಿಕ್ಕಪ್ಪ ಕ್ಲರ್ಕ ಹುದ್ದೆಯಲ್ಲಿದ್ದ. ನನ್ನ ಚಿಕ್ಕಪ್ಪನ ಹೆಂಡತಿಯೂ ಸಹ ಲೋಕೋಪಯೋಗಿ ಇಲಾಖೆಯಲ್ಲಿ ಕ್ಲರ್ಕ ಎಂದು ಕೆಲಸ ಮಾಡುತ್ತಿದ್ದಳು. ನನಗೆ ಆಸ್ತಿ ಮಾರಾಟ ಮಾಡಿದ ಸಮಯದಲ್ಲಿ ನನ್ನ ಚಿಕ್ಕಪ್ಪನಿಗೆ ನಿವೃತ್ತಿ ಪಿಂಚಣಿ ಬರುತ್ತಿದ್ದು, ಆತನ ಹೆಂಡತಿ ಸಂಬಳ ಪಡೆಯುತ್ತಿದ್ದಳು ಎಂದರೆ ಸರಿ.

ನನ್ನ ಚಿಕ್ಕಪ್ಪನಿಗೆ ಇಬ್ಬರು ಗಂಡುಮಕ್ಕಳು. ನನಗೆ ಜಮೀನು ಮಾರಾಟ ಮಾಡುವಾಗ ನನ್ನ ಚಿಕ್ಕಪ್ಪನ ಮಕ್ಕಳು ಬಿಇ ಇಂಜನಿಯರಿಂಗ್ ಮುಗಿಸಿ ನೌಕರಿಯಲ್ಲಿದ್ದರು ಎಂದರೆ ಸರಿ. ನನ್ನ ಚಿಕ್ಕಪ್ಪನ ಮಕ್ಕಳಿಗೂ ಸಹ ಒಳ್ಳೆಯ ಸಂಬಳ

ಇತ್ತು ಎಂದರೆ ಸರಿ. ನನ್ನ ಚಿಕ್ಕಪ್ಪನ ಕುಟುಂಬಕ್ಕೆ ರೂ. 4 ಲಕ್ಷ ಪ್ರತಿ ತಿಂಗಳ ವರಮಾನ ಬರುತ್ತಿತ್ತು ಎಂದರೆ ಸರಿ. ನನಗೆ ಜಮೀನು ಮಾರಾಟ ಮಾಡುವ ಸಮಯದಲ್ಲಿ ನನ್ನ ಚಿಕ್ಕಪ್ಪನ ಕುಟುಂಬಕ್ಕೆ ಹಣಕಾಸಿನ ತೊಂದರೆ ಇರಲಿಲ್ಲ ಎಂದರೆ ಸರಿ.

ನನ್ನ ಚಿಕ್ಕಪ್ಪ ಕುಟುಂಬ ಸಹಿತ ಕಾರವಾರದಲ್ಲಿ ಬಹಳ ವರ್ಷಗಳಿಂದ ವಾಸಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿ. ನನ್ನ ಚಿಕ್ಕಪ್ಪ 21 ನೇ ವಯಸ್ಸಿನಲ್ಲಿ ನೌಕರಿಗೆ ಸೇರಿದ ವಿಷಯ ಗೊತ್ತಿಲ್ಲ. ನನ್ನ ಚಿಕ್ಕಪ್ಪ ನೌಕರಸ್ತಳನ್ನು ಮದುವೆಯಾಗಿದ್ದ ಎಂದರೆ, ಆಗ ನಾನು ಚಿಕ್ಕವನಿದ್ದೆ ಎಂದು ಹೇಳುತ್ತಾರೆ. ನನ್ನ ಚಿಕ್ಕಪ್ಪ ನನಗೆ ಮಾರಾಟ ಮಾಡಿದ ಜಮೀನಿನಿಂದ ಉತ್ಪನ್ನ ತೆಗೆದುಕೊಂಡು ಹೋಗುತ್ತಿರುವ ಕುರಿತು ನನಗೆ ಗೊತ್ತಿಲ್ಲ. ನನ್ನ ಚಿಕ್ಕಪ್ಪನ ಕುಟುಂಬಕ್ಕೆ ಸಾಕಷ್ಟ ಆದಾಯ ಇರುವುದರಿಂದ ನನಗೆ ಮಾರಾಟ ಮಾಡಿದ ಆಸ್ತಿಯ ಎಲ್ಲ ಉತ್ಪನ್ನವನ್ನು ನನ್ನ ತಂದೆ ಕುಟುಂಬ ಪಡೆದುಕೊಳ್ಳಲಿ ಎಂದು ಬಿಟ್ಟಿದ್ದ ಎಂದರೆ ನನಗೆ ಗೊತ್ತಿಲ್ಲ.

ಖರೀದಿಪತ್ರದಲ್ಲಿ ನಮೂದಿಸಿದ ರೂ.3,38,000/- ಹಣವನ್ನು ಕ್ರಯದ ಸಲುವಾಗಿ ಮಾತ್ರ ಖರೀದಿ ಪತ್ರದಲ್ಲಿ ತೋರಿಸಿದ್ದು ಎಂದರೆ ಸಾಕ್ಷಿ ಅದಕ್ಕೆ ತಗಲುವ ಮುದ್ರಾಂಕ ಶುಲ್ಕವನ್ನು ನಾನೇ ತುಂಬಿದ್ದೇನೆ ಎಂದು ಹೇಳುತ್ತಾರೆ. ಸದರಿ ಕ್ರಯದ ಹಣ ತನಗೆ ಬೇಡವೆಂದು ನನ್ನ ಚಿಕ್ಕಪ್ಪ ಹೇಳಿದ್ದ ಎಂದರೆ ಸರಿಯಲ್ಲ. 1,3 ಮತ್ತು 6 ನೇ ಪ್ರತಿವಾದಿ ಖರೀದಿ ಪತ್ರದ ಪ್ರಕಾರ ಏನಾದರೂ ತೆಗೆದುಕೊಳ್ಳಲೇಬೇಕು ಎಂದು ಹೇಳಿದಾರ ನನ್ನ ಚಿಕ್ಕಪ್ಪ ಒಂದು ಲಕ್ಷ ಮಾತ್ರ ಅವರಿಂದ ಪಡೆದಿದ್ದಾನೆ ಎಂದರೆ ಸರಿಯಲ್ಲ. ಸದರಿ ಒಂದುಲಕ್ಷ ಹಣವನ್ನು ಕುಟುಂಬದ ಆದಾಯದಿಂದ ನೀಡಿದ್ದು, ಬ್ಯಾಂಕಿನ ಸಾಲ ವಗೈರೆ ತೆಗೆಯಲು ಒಬ್ಬರ ಹೆಸರಿನಲ್ಲಿದ್ದರೆ ಅನುಕೂಲವಾಗುವುದೆಂದು ನನ್ನ ಹೆಸರಿನಲ್ಲಿ ಖರೀದಿಸಿದ್ದಾರೆ ಎಂದರೆ ಸರಿಯಲ್ಲ.

ದಸ್ತಾವೇಜು ನನ್ನ ಹೆಸರಿನಲ್ಲಿದ್ದರ ಗೈರುಪಾಯಿದೆ ತೆಗೆದುಕೊಂಡು ಅದನ್ನು ನಾನೇ ಖರೀದಿಸಿದ್ದೇನೆ ಎಂದು ಹೇಳುತ್ತಿರುವೆ ಎಂದರೆ ಸರಿಯಲ್ಲ.

ನಮ್ಮ ಕುಟುಂಬದ ಮಾಲೀಕತ್ವದಲ್ಲಿ 4 ಅಂಗಡಿಗಳಿದ್ದು, ಅವುಗಳಲ್ಲಿ 3 ರಲ್ಲಿ ಬಾಡಿಗೆದಾರರು ಇದ್ದಾರೆ, ಒಂದು ಬಂದ್ ಮಾಡಲಾಗಿದೆ. ಸದರಿ ಅಂಗಡಿಗಳು ಮೊದಲು ತಂದೆಯ ಹೆಸರಿನಲ್ಲಿದ್ದು, ಸಧ್ಯ ನನ್ನ ತಾಯಿಯ ಹೆಸರಿನಲ್ಲಿರುತ್ತವೆ. 2001 ರಲ್ಲಿ ತಂದೆ ಮೃತಪಟ್ಟ ನಂತರ ನನ್ನ ತಾಯಿಯ ಹೆಸರಿನಲ್ಲಿ ಅಂಗಡಿಗಳು ಮುಟೇಶನ್ ಆಗಿರುತ್ತವೆ. ಸದರಿ ಅಂಗಡಿಗಳು ನನ್ನ ಕಬ್ಜಾ ವಹಿವಾಟಿಯಲ್ಲಿರುವುದಿಲ್ಲ. ಸದರಿ ಅಂಗಡಿಗಳ ಕಬ್ಜಾ ವಹಿವಾಟು ನನ್ನ ತಾಯಿ ಬಳಿ ಇದೆ. ಸದರಿ ಅಂಗಡಿಗಳ ಬಾಡಿಗೆಗಳಲ್ಲಿ ನಾನು ಮತ್ತು ನನ್ನ ಸಹೋದರರು ಒಂದೊಂದು ಅಂಗಡಿಯ ಬಾಡಿಗೆ ಪಡೆಯುತ್ತಿದ್ದೇವೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲನ್ನು ವಿನಂತಿ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.